ಪ್ರತಿಬಿಂಬ

**PRATIBIMBA** –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 42-52.
©*IIMRD*, Mysuru
www.iimrd.com

# ಕುಂಚಿಟಿಗ ಸಮುದಾಯದ ಆಚರಣೆ ಮತ್ತು ಸಂಪ್ರದಾಯಗಳು

**ರವೀಂದ್ರನಾಥ್. ಡಿ. ಬಿ.* ಮತ್ತು ಡಾ. ಓ. ನಾಗರಾಜು****

*ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.

**ಕನ್ನಡ ಸಹ ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರು ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೊರಟಗೆರೆ, ತುಮಕೂರು.

***ಸಾರಾಂಶ:(Abstract)***

*ಜನಪದರ ಬದುಕಿನಲ್ಲಿ ಆಚರಣೆಗಳು ಅವಿಭಾಜ್ಯ ಅಂಗಗಳಾಗಿವೆ. ಅವು ಕಾಲಮಾನಕ್ಕೆ ತಕ್ಕ ಹಾಗೆ ಬದಲಾವಣೆಗೊಳ್ಳುತ್ತ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನಿರಂತರವಾಗಿ ಸಾಗಿ ಬಂದಿವೆ. ಮನುಷ್ಯ ತಾನು ನಡೆಸಿಕೊಂಡು ಬಂದ ವಿಶಿಷ್ಟ ಆಚರಣೆಗಳ ಬಗ್ಗೆ ಹೊಂದಿದಂತಹ ಉತ್ಸಾಹ ಶ್ರದ್ಧೆ ನಂಬಿಕೆಗಳು ಸಂಪ್ರದಾಯಗಳ ಸೃಷ್ಟಿಗೆ ಕಾರಣವಾದವು. ಇಂತಹ ಸಂಪ್ರದಾಯ ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ಹರಿಯುತ್ತಾ ಬಂದಿವೆ. ಜನಪದರ ಆಚರಣೆಯಲ್ಲಿರುವ ಬಹುತೇಕ ಹಬ್ಬಗಳು ಕೃಷಿಯ ಕ್ರಿಯಾಚರಣೆಯ ಹಿನ್ನೆಲೆಯಲ್ಲಿ ಬಂದವುಗಳಾಗಿವೆ. ಈ ಹಿನ್ನಲೆಯಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿರುವ ಕುಂಚಿಟಿಗ ಸಮುದಾಯದ ಆಚರಣೆ ಮತ್ತು ಸಂಪ್ರದಾಯಗಳನ್ನು ವಿವರಿಸಲಾಗಿದೆ.*

***ಮುಖ್ಯಪದಗಳು (Keywords)*** *ಕುಂಚಿಟಿಗ, ಆಚರಣೆ, ಸಂಪ್ರದಾಯ, ಜನಪದ.*

## ಪೀಠಿಕೆ

ಮನುಷ್ಯ ಹುಟ್ಟಿನಿಂದ ಹಿಡಿದು ಸಾಯುವವರೆಗೆ ಹಾಗೂ ಸತ್ತ ನಂತರವು ಅನೇಕ ರೀತಿಯ ಆಚರಣೆಗಳಿವೆ. ಆದಾಗ್ಯೂ ಇಂದಿನ ಸಮಾಜದಲ್ಲಿ ಆಚರಣೆಗಳು ಕ್ರಿಯಾಶೀಲವಾಗಿ ಉಳಿದುಕೊಂಡಿವೆ ಮತ್ತು ಬತ್ತಲಾರದವುಗಳಾಗಿವೆ. ಈ ಆಚರಣೆಗಳನ್ನು ಅಧ್ಯಯನದ ದೃಷ್ಟಿಯಿಂದ ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳು ಎಂದು ಎರಡು ಭಾಗಗಳಾಗಿ ವಿಭಾಗಿಸಿಕೊಳ್ಳಬಹುದಾಗಿದೆ.

## ಜೀವನಾವರ್ತನ ಆಚರಣೆಗಳು

ಆಚರಣೆ ಮತ್ತು ಸಂಪ್ರದಾಯಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಘಟಿಸುವಂತಹ ಹುಟ್ಟಿನಿಂದ ಸಾವಿನವರೆಗಿನ ಸಂದರ್ಭದಲ್ಲಿನ ಸಂಪ್ರದಾಯಬದ್ಧ ಆಚರಣೆಗಳನ್ನು ಜೀವನಾವರ್ತನ ಆಚರಣೆಗಳೆಂದು ಗುರುತಿಸುತ್ತೇವೆ. ಹುಟ್ಟು, ನಾಮಕರಣ, ಜವಳ, ಕಿವಿ ಚುಚ್ಚುವುದು,

*Please cite this article as: ರವೀಂದ್ರನಾಥ್. ಡಿ. ಮತ್ತು ಡಾ. ಓ. ನಾಗರಾಜು.* (2023). ಕುಂಚಿಟಿಗ ಸಮುದಾಯದ ಆಚರಣೆ ಮತ್ತು ಸಂಪ್ರದಾಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 42–52.*

ಮದುವೆ, ಗರ್ಭಿಣಿ, ಸಾವು ಇತ್ಯಾದಿಗಳು ಜೀವನಾವರ್ತನ ಆಚರಣೆಗಳಲ್ಲಿ ಪ್ರಮುಖವೆನಿಸಿವೆ. ಇವರು ತಮ್ಮ ಜೀವನಾವರ್ತನದಲ್ಲಿ ಅನೇಕ ರೀತಿಯ ಸಂಪ್ರದಾಯ ವಿಧಿ–ವಿಧಾನಗಳನ್ನು ಕಟ್ಟು ಪಾಡಿನಿಂದ ಆಚರಿಸುತ್ತಾರೆ. ಇತರೆ ಸಮುದಾಯದ ಪರಂಪರೆಯೆಗಳಲ್ಲಿ ಜೀವನಾವರ್ತನೆಗಳು ಬೇರೆ ರೀತಿಯಲ್ಲಿ ಕಂಡುಬಂದರೂ ಕುಂಚಿಟಿಗರ ಆಚರಣೆಗಳು ಪುರಾತನ ಸಂಸ್ಕೃತಿಯ ಹಲವು ಮುಖಗಳನ್ನು ಪರಿಚಯ ಮಾಡಿಕೊಡುತ್ತವೆ.

**ಪಂಚ ಸಂಸ್ಕಾರಗಳು**

ಕುಂಚಿಟಿಗ ಸಮುದಾಯವು ದ್ರಾವಿಡ ಮೂಲವಾಗಿದ್ದರೂ ವೈಧಿಕ ವಿಚಾರಗಳಿಂದ ಪ್ರಭಾವಿತವಾಗಿದೆ. ಶ್ರಮಸಂಸ್ಕೃತಿಯ ಈ ಸಮಾಜದಲ್ಲಿ ಪಂಚಕರ್ಮಗಳನ್ನು ಪಾಲಿಸಲಾಗುತ್ತದೆ. ಇವೇ ಪಂಚ ಸಂಸ್ಕಾರಗಳಾಗಿವೆ. ಜಾತಕರ್ಮ, ನಾಮಕರಣ, ಚೌಲ, ವಿವಾಹ, ಅಂತ್ಯಸಂಸ್ಕಾರದ ಆಚರಣೆಗಳು ಪಾಲಿಸುವ ವಿಧಿ ವಿಧಾನಗಳು, ಸಂಪ್ರದಾಯ ಪದ್ಧತಿಗಳ ಮೂಲಕ ಜನಾಂಗದ ಸಂಸ್ಕೃತಿ ಭಿನ್ನತೆಯನ್ನು ಗುರುತಿಸುವಲ್ಲಿ ಹಾಗೂ ಕುಂಚಿಟಿಗ ಜನಾಂಗವನ್ನು ಬೆಸೆಯುವ ಪ್ರಕ್ರಿಯೆಯಲ್ಲಿ ಪಂಚಸಂಸ್ಕಾರಗಳು ಪ್ರಮುಖ ಪಾತ್ರ ವಹಿಸುತ್ತವೆ.

**ಜನನ**

'ಹುಟ್ಟು ಆಕಸ್ಮಿಕ ಸಾವು ಖಚಿತ' ಎಂಬ ವಾಕ್ಯೋಕ್ತಿಯಂತೆ ಹುಟ್ಟು ಸಾವುಗಳ ಮಧ್ಯದ ಅವಧಿಯ ಬದುಕಿನಲ್ಲಿ ಎದುರಾಗುವ ಆಚರಣೆಗಳಾಗಲಿ, ಸಂಪ್ರದಾಯಗಳಾಗಲಿ ಅನಿವಾರ್ಯವಾಗಿ ಬರುತ್ತವೆ. ಈ ಆಚರಣೆಗಳು ಮಾನವನನ್ನು ಕ್ರಿಯಾಶೀಲನನ್ನಾಗಿಸುತ್ತವೆ. ಒಂದು ಮಗು ಹುಟ್ಟುವಿಕೆಯ ಪ್ರಕ್ರಿಯೆ ಗರ್ಭಾವಸ್ಥೆಯಿಂದ ಅದರ ಸಂಬಂಧಿಸಿದ ಆಚರಣೆಗಳು ಆರಂಭವಾಗುತ್ತವೆ. ಚೊಚ್ಚಲ ಗರ್ಭಿಣಿಯನ್ನು ಐದು ಅಥವಾ ಏಳು ತಿಂಗಳು ತುಂಬುವ ಅವಧಿಯೊಳಗೆ ಗಂಡನ ಮನೆಯಿಂದ ತವರಿನವರು ಕರೆದುಕೊಂಡು ಬರುವ ರೂಢಿಯಿದೆ. ಚೊಚ್ಚಲ ಹೆರಿಗೆ ಬಗ್ಗೆ ಹೆಣ್ಣಿಗೆ ಆತಂಕ ಮನೆ ಮಾಡಿರುತ್ತದೆ. ಈ ಆತಂಕವನ್ನು ಕಡಿಮೆ ಮಾಡುವಲ್ಲಿ ತನ್ನ ತವರು ಮನೆಯ ಆಪ್ತತೆ, ಪರಿಸರ ಮಹತ್ತರ ಪಾತ್ರ ವಹಿಸುತ್ತದೆ.

**ನಾಮಕರಣ**

ಹುಟ್ಟಿದ ಮಕ್ಕಳಿಗೆ ಸಂಪ್ರದಾಯಬದ್ಧವಾಗಿ ಹೆಸರನ್ನು ಸೂಚಿಸುವದೇ ನಾಮಕರಣ. ಕುಂಚಿಟಿಗರು ಮನೆಯಲ್ಲಿಯೇ ನಾಮಕರಣ ಮಾಡುತ್ತಾರೆ. ಗುರುಹಿರಿಯರನ್ನು ಕೇಳಿ ಶುಭದಿನದಂದು ಈ ಕಾರ್ಯವನ್ನು ಇಟ್ಟುಕೊಳ್ಳುತ್ತಾರೆ. ಹೆಸರ ಬಲ ಯಾವ ಅಕ್ಷರದಿಂದ ಬರುತ್ತದೆಯೋ ಆ ಅಕ್ಷರದಿಂದ ಆರಂಭವಾಗುವ ಹೆಸರನ್ನು ಮಗುವಿಗೆ ಇಡುತ್ತಾರೆ. ಮಗುವಿಗೆ ಅತ್ತೆಯಾಗುವವರು ತಮಗೆ ಬೇಕಾದ ಮನೆದೇವರ ಹೆಸರಿನ ಜೊತೆ ಮನೆಯ ಹಿರಿಯರ ಅಥವಾ ಆಧುನಿಕತೆಗೆ ತಕ್ಕಂತೆ ತಮಗೆ ಅನುಕೂಲಕ್ಕನುಗುಣವಾಗಿ ಬೇರೆ ಬೇರೆ ಎರಡ್ಮೂರು ಹೆಸರುಗಳನ್ನು ಸೂಚಿಸಿ ನಾಮಕರಣ ಮಾಡುತ್ತಾರೆ.

**ಋತುಮತಿ**

ಋತುಮತಿಯ ಪ್ರಕ್ರಿಯೆಯನ್ನು ಕುರಿತು ಒಮ್ಮೆ ಹೆಣ್ಣು ಋತುಮತಿಯಾದ ಮೇಲೆ ಮಧ್ಯ ವಯಸ್ಸಿನಲ್ಲಿ ಆಕೆಯ ಋತುಚಕ್ರ ಸ್ಥಗಿತಗೊಳ್ಳುವವರೆಗಿನ ಘಟ್ಟವನ್ನು ಫಲವಂತಿಕೆಯ ಕಾಲ ಎಂದು

ಗುರುತಿಸಲಾಗುವುದು. ಹೆಣ್ಣು ಋತುಮತಿಯಾದಾಗ ತನ್ನ ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಜೈವಿಕ ಬದಲಾವಣೆ ಆಗುತ್ತಿರುವುದನ್ನು ಅನುಭವಿಸುತ್ತಾಳೆ. ಹನ್ನೊಂದು ದಿನದವರೆಗೆ ಮೈಲಿಗೆ ದಿನಗಳೆಂದು ಹೇಳುತ್ತಾರೆ. ಆ ದಿನ ಮೈನೆರೆದ ಹೆಣ್ಣನ್ನು ಅತ್ತೆಯಾದವರು ಎಲ್ಲರೂ ಸೇರಿಕೊಂಡು ಅವಳ ಮನೆಯಲ್ಲಿ ಸ್ನಾನ ಮಾಡಿಸುತ್ತಾರೆ. ಆ ಮುಟ್ಟು ಮಲಿನವಾದ್ದರಿಂದ ಮೈಲಿಗೆ ಎಂದರೂ ಫಲವಂತಿಕೆ ಎಂದೇ ಭಾವಿಸುತ್ತಿದ್ದರು. ಹೆಣ್ಣು ದೈಹಿಕವಾಗಿ, ಪೌಷ್ಠಿಕವಾಗಿ ಬೆಳೆಯಲಿ ಎಂದು ಬಂಧುವರ್ಗದವರು ಕಳುಹಿಸಿದ ಹಬ್ಬದೂಟವನ್ನು ಉಣ್ಣುವಂತೆ ಅವಳನ್ನು ಸಂಭ್ರಮದಿಂದ ಸಂಪ್ರೀತಿಯಿಂದ ಕಾಣುತ್ತಿದ್ದರು. ಪ್ರತಿನಿತ್ಯ ಸ್ನಾನ ಮಾಡಿಸುತ್ತಾ ಹೆಣ್ಣಿಗೆ ತನ್ನ ಜೈವಿಕ ಬದಲಾವಣೆಯ ಬಗ್ಗೆ ಗಾಬರಿ ಅಥವಾ ಆತಂಕದ ಭಾವನೆ ದೂರ ಸರಿದು ಸಂತೋಷ ಪಡುವ ರೀತಿಯಲ್ಲಿ ಸನ್ನಿವೇಶಗಳನ್ನು ರೂಪಿಸುತ್ತಾರೆ.

**ಮದುವೆ**

ಕುಂಚಿಟಿಗ ಸಮಾಜದಲ್ಲಿ ಬಹಳ ಮುಖ್ಯ ಸಂಸ್ಕಾರ ಎಂದರೆ ಮದುವೆ(ವಿವಾಹ). ಈ ಸಮುದಾಯದ ಯುವಕ ಅಥವಾ ಯುವತಿ ಪ್ರಾಪ್ತ ವಯಸ್ಕರಾದ ಮೇಲೆ ನೆರವೇರಿಸುವಂತಹ ಸಾಮಾಜಿಕ ಪ್ರಕ್ರಿಯೆ ಈ ವಿವಾಹ. ಇವರಿಬ್ಬರೂ ಗುರು–ಹಿರಿಯರ ಸಾಕ್ಷಿಯಾಗಿ ಕೈ ಹಿಡಿದು ನಡೆದರೆ ಅಂಥ ದಂಪತಿಗಳ ಬದುಕು ಸ್ವರ್ಗ ಸುಖದ ಬೀಡಾಗುತ್ತದೆ. ಪ್ರೀತಿಸಿ ಮದುವೆಯಾದವುಗಳು ಮುರಿದು ಬೀಳುವುದೇ ಹೆಚ್ಚು! ಗಂಡಿನ ಸೊಕ್ಕು ಮುರಿಯಬೇಕಾದರೆ ಮದುವೆ ಮಾಡಬೇಕು ಎಂಬುದಾಗಿ ಹಿರಿಯರು ಬಯಸುತ್ತಾರೆ. ಹರೆಯಕ್ಕೆ ಬಂದಾಗ ಯುವಕ–ಯುವತಿಯರ ವರ್ತನೆ ಹದಗೆಡಬಾರದೆಂಬ ಕಾರಣಕ್ಕೆ ತಮ್ಮ ತಮ್ಮ ಮನೆತನದ ಹಿರಿಯರು ತಂದೆ–ತಾಯಿ ಅಥವಾ ಇನ್ನುಳಿದ ಪಾಲಕರು ವಿಚಾರ ಮಾಡುತ್ತಾರೆ. ಇದು ಹಿಂದಿನ ಕಾಲದಿಂದಲೂ ನಡೆದು ಬಂದ ಪದ್ಧತಿ ಮತ್ತು ಪರಂಪರೆಯಾಗಿದೆ. ಗಂಡು–ಹೆಣ್ಣನ್ನು ಒಂದು ಗೂಡಿಸುವ ಮತ್ತು ಜೀವನ ಸಂಗಾತಿಗಳನ್ನಾಗಿ ಮಾಡುವಂತಹ ವಿಶಿಷ್ಟ ಸಂದರ್ಭವಿದು.

ಮದುವೆ ಬದುಕಿಗೊಂದು ಸುಭದ್ರತೆಯನ್ನೂ ಜವಾಬ್ದಾರಿಯನ್ನು ತಂದು ಕೊಟ್ಟು ಜೀವನಕ್ಕೆ ಉತ್ಸಾಹವನ್ನೂ ಆನಂದವನ್ನು, ಚೈತನ್ಯವನ್ನು ತುಂಬುತ್ತದೆ. ಕುಂಚಿಟಿಗರ ಮದುವೆಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಂಪ್ರದಾಯ, ಆಚರಣೆಗಳಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇವರಲ್ಲಿ ಅಂತರ್ ಜಾತಿಯ ವಿವಾಹಕ್ಕೆ ಅವಕಾಶವಿಲ್ಲ. ಮದುವೆಗಳಲ್ಲಿ ಬೆಡಗುಗಳು ಪಾತ್ರ ಮುಖ್ಯವಾಗಿರುತ್ತದೆ. ಸ್ವಗೋತ್ರ, ಸೋದರ ಗೋತ್ರ ಮತ್ತು ಅಡ್ಡ ದಾಯಾದಿಗಳನ್ನು ಹೊರತು ಪಡಿಸಿ ಇನ್ನುಳಿದ ಬೆಡಗುಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಲಾಗುತ್ತದೆ. ಕುಂಚಿಟಿಗರಲ್ಲಿ ಮದುವೆಗೆ ಸಂಬಂಧಿಸಿದಂತೆ ಕೆಲವು ಹಲವು ಆಚರಣೆಗಳಿವೆ.

**ಹೆಣ್ಣು ನೋಡುವ ಶಾಸ್ತ್ರ: ಮದುವೆಯ ರಕ್ತ ಸಂಬಂಧಗಳು**

ಕುಂಚಿಟಿಗರು ತಮ್ಮ ತಮ್ಮ ಕಳ್ಳು ಬಳ್ಳಿಯಲ್ಲಿ, ಕುಲ–ಗೋತ್ರ–ಬೆಡಗುಗಳನ್ನು ನೋಡಿ ತಮ್ಮ ಕುಟುಂಬ ಶಾಂತಿಯಿಂದ ಇರಲು ತಮ್ಮ ಒಳಗಿನ ಸಂಬಂಧದಲ್ಲಿರುವ ಹೆಣ್ಣುಗಳನ್ನು ತೆಗೆದು ಮದುವೆ ಮಾಡುತ್ತಿದ್ದುದರಿಂದ, ತಂದೆಯ ಸಹೋದರಿಯ ಮಗಳು, ತಾಯಿಯ ಸಹೋದರನ ಮಗಳು, ಸಹೋದರ ಮಾವನ ಮಗಳು, ದೊಡ್ಡ ಚಿಕ್ಕ ಅಜ್ಜ–ಅಜ್ಜಿ ಮೊಮ್ಮಕ್ಕಳು ಮರಿಮೊಮ್ಮಕ್ಕಳು ಮಗಳ–ಮಗಳು ಹೀಗೆ ಹತ್ತಿರದ ಸಂಬಂಧಗಳಲ್ಲಿಯೇ ಮದುವೆ ಮಾಡುತ್ತಿದ್ದರು. ಸ್ವಗೋತ್ರ ವಿವಾಹಗಳು ನಿಷೇಧ. ದೂರದ

ಸಂಬಂಧದ ಮದುವೆಗಳು ಅಪರೂಪವಾಗಿದ್ದವು ಎಂದು ಹೇಳಬಹುದು. ಇತ್ತೀಚೆಗೆ ಈ ಜನಾಂಗದಲ್ಲಿ ಓದು–ಬರಹ ಕಲಿತ ಹೆಣ್ಣು–ಗಂಡುಗಳು ತಮಗೆ ಬೇಕಾದ ವರ–ವಧುಗಳನ್ನು ನೋಡಲು ತಾವೇ ಹೋಗವರು. ನಂತರ ಹಿರಿಯರು ಸೇರಿ ಮಾತಾಡಿ ಲಗ್ನ ನಿಶ್ಚಯಿಸುವರು.

**ವೀಳ್ಯದ ಶಾಸ್ತ್ರ**

ವಿವಾಹ ಸಂಬಂಧ ನಿಗಧಿಯಾಗುವಲ್ಲಿ ನಿಶ್ಚಿತಾರ್ಥ ಅಥವಾ ವೀಳ್ಯದಶಾಸ್ತ್ರ ನಿರ್ಣಾಯಕವಾದದ್ದು. ವಿವಾಹದ ಸಂಭವನೀಯ ದಿನಾಂಕಗಳ ಹಿಂದಿನ ದಿನ, ಹದಿನೈದು ಅಥವಾ ಮೂವತ್ತು ದಿನಗಳ ಮುಂಚಿತವಾಗಿ ಈ ಶಾಸ್ತ್ರವನ್ನು ಮಾಡುವ ಸಾಮಾನ್ಯ ವಾಡಿಕೆಯಿದೆ. ಹೆಣ್ಣಿನ ಮನೆಯಲ್ಲಿ ಕರೆ ಕಂಬಳಿ ಗದ್ದುಗೆ ಮೇಲೆ ಗುರುಕಳಸ ಹೂಡುತ್ತಾರೆ. ಗುರುಗಳು ಮತ್ತು ಹಿರಿಯರು ಸೇರಿಕೊಂಡು ಗದ್ದುಗೆ ಪೂಜೆ ಮಾಡಿ ವೀಳ್ಯ ಕೊಟ್ಟು ಪರಸ್ಪರ ಸಿಹಿ ಹಂಚಿಕೊಳ್ಳುತ್ತಾರೆ.

**ಎದುರುಗೊಳ್ಳುವ ಆಚರಣೆ**

ವಧುವಿನ ಊರಿನ ಪ್ರವೇಶ ದ್ವಾರದಲ್ಲಿಯೇ ಮದಲಿಂಗನಿಗೆ ಹೂ ಹಾರವನ್ನು ಹಾಕಿ ಸಂಭ್ರಮದಿಂದ ಬರಮಾಡಿಕೊಳ್ಳುತ್ತಾರೆ. ದೇವಸ್ಥಾನದ ಆವರಣದಲ್ಲಿ ಮದಲಿಂಗನ ಜೊತೆಗೆ ಐದು ಅಥವಾ ಒಂಬತ್ತು ಜನರನ್ನು ಕೂರಿಸಿ, ರುಮಾಲು(ಪೇಟ) ಸುತ್ತಿ, ವಿಭೂತಿ ಹಚ್ಚಿ ಪರಸ್ಪರರು ಕಳಸ ಬೆಳಗುತ್ತಾರೆ. ಜೊತೆ ಬಂದಂತಹವರಿಗೆ ಬೆಲ್ಲದ ಪಾನಕ ಕೊಡುವ ಸಂಪ್ರದಾಯವಿದೆ. ಇದು ಹೆಣ್ಣಿನ ಮನೆಯವರ ಮೊದಲ ಆತಿಥ್ಯ. ಇತ್ತಿಚೆಗೆ ಕಲ್ಯಾಣ ಮಂಟಪ, ಛತ್ರಗಳಲ್ಲಿ ಸರಳವಾಗಿ ಮಾಡಿ ಮುಗಿಸುತ್ತಾರೆ.

**ಅರಿಶಿಣದ ಶಾಸ್ತ್ರ**

ಮದುವೆಯ ಹಿಂದಿನ ರಾತ್ರಿ ಹೆಣ್ಣು ಅಥವಾ ಗಂಡನ್ನು ಮದುಮಗಳು ಅಥವಾ ಮದುಮಗ ಮಾಡುವ ಶಾಸ್ತ್ರವಿದು. ಹಿಂದಿನ ಕಾಲದಲ್ಲಿ ವಾರಗಟ್ಟಲೆ ನಡೆಯುತ್ತಿದ್ದವು. ಮದುವೆಯಾಗುವ ಹೆಣ್ಣನ್ನು ಮುತ್ತೈದೆಯರು ಕರೆ ತಂದು ಅಕ್ಕಿಯಿಂದ ಬರೆದ ಹಸೆಯನ್ನು ಪೂಜಿಸಿ ಅದರ ಮೇಲೆ ಕೂರಿಸುತ್ತಾರೆ. ಈ ಶಾಸ್ತ್ರದಲ್ಲಿ ಹೆಣ್ಣಿನ ತಾಯಿ ಪಾಲ್ಗೊಳ್ಳುವುದಿಲ್ಲ. ಅವರನ್ನು ಬಿಟ್ಟು ಅಕ್ಕ–ತಂಗಿ ಎಲ್ಲಾ ಹತ್ತಿರದ ಸಂಬಂಧಿಕರು ಅರಿಶಿಣದ ಎಣ್ಣೆಯನ್ನು ಹೆಣ್ಣಿನ ಕೈಕಾಲು ಮುಖ ಬೆನ್ನಿಗೆ ಹಚ್ಚಿ ಆರತಿ ಬೆಳಗುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣು ತನಗಿಂತ ಹಿರಿಯರ ಕಾಲಿಗೆ ನಮಸ್ಕಾರ ಮಾಡಿ ಎಲೆ, ಅಡಿಕೆ ನೀಡುತ್ತಾಳೆ.

**ಸುರುಗಿ ನೀರು**

ಚೌಕಕಾರದ ಸುತ್ತಳತೆಯ ನಾಲ್ಕು ತುದಿಯಲ್ಲಿ ಕುಂಭಗಳನ್ನು ಇಟ್ಟು, ಒಂಬತ್ತು ಸುತ್ತು ಬಿಳಿಯ ಸುರಿಗೆ ದಾರ ಸುತ್ತುವುದು, ಈ ಚೌಕಾಕಾರದ ಮಧ್ಯಭಾಗದಲ್ಲಿ ಕೃಷಿ ಪರಿಕರವಾದಂತಹ ಕೊರಡನ್ನು ಇಟ್ಟು ಅದರ ಮೇಲೆ ವಧು–ವರರನ್ನು ನಿಲ್ಲಿಸಿ ಬಿಳಿ ವಸ್ತ್ರಗಳನ್ನು ತಲೆಯ ಮೇಲ್ಭಾಗದಲ್ಲಿ ಹೊದಿಸಿ ಆ ಕುಂಭಗಳಲ್ಲಿ ಗಂಗಾಪೂಜೆ ಮಾಡಿದ ಕುಂಭದ ನೀರನ್ನು ಹಾಕುತ್ತಾರೆ. ಚೌಕಾಕಾರದ ಮಧ್ಯದಲ್ಲಿ ಆಲದ ಮತ್ತು ಹತ್ತಿ ಕೊನೆ ಹಾಸಿ, ಅದರ ಮೇಲೆ ಮಣೆ ಇಟ್ಟು ಮದಲಿಂಗನನ್ನು ಕೂರಿಸಿ ಮುತ್ತೈದೆಯರು ಕೈಗಳನ್ನು ಕತ್ತರಿ ಹಾಕ್ಕೊಂಡು ನಾಲ್ಕು ಚೆಂಬುಗಳ ನೀರನ್ನು ಹೊಯ್ಯುವಾಗ ಮದಲಿಂಗನ ತಂಗಿ ಗಂಗಳವನ್ನು ಅಡ್ಡ

ಹಿಡಿಯುತ್ತಾಳೆ. ತದ ನಂತರದಲ್ಲಿ ಬಿಸಿನೀರಿನ ವಿಶೇಷ ಸ್ನಾನ ಮಾಡಿಸುತ್ತಾರೆ. ಇದೇ ಶಾಸ್ತ್ರದ ಪ್ರಕಾರವಾಗಿ ಮದಲಿಂಗಿತ್ತಿಯನ್ನು ಸ್ನಾನ ಮಾಡಿಸುತ್ತಾರೆ.

**ಧಾರೆ ಮುಹೂರ್ತ**

ಮದುವೆಯಲ್ಲಿ ಧಾರೆ ಎರೆಯುವುದು, ತಾಳಿ ಕಟ್ಟುವುದು ಎಂಬ ಎರಡು ಸಂಪ್ರದಾಯಗಳಿವೆ. ಹಿಂದೂ ಶಾಸ್ತ್ರದ ಪ್ರಕಾರ ಧಾರೆ ಮಾಡಿಕೊಡುವುದರಲ್ಲಿ ಹೆಣ್ಣಿನ ತಂದೆಯು ತನ್ನ ಮಗಳನ್ನು ಗಂಡಿಗೆ ವಹಿಸಿಕೊಡುವುದರಲ್ಲಿನ ಸಂಕಲ್ಪ, ಸಮರ್ಪಣ ಎರಡರ ಭಾವವಿದೆ. ಮದುಮಗನು ಮಂಗಳ ಸ್ನಾನ ಮಾಡಿ ಕಚ್ಚೆ ಪಂಚೆ, ಬಿಳಿ ಮೇಲಂಗಿ ಧರಿಸಿ, ಪೇಟ ಸುತ್ತಿಕೊಂಡು, ತಲೆಗೆ ಬಾಸಿಂಗ ಕಟ್ಟಿಕೊಂಡು, ವಾದ್ಯಮೇಳದೊಂದಿಗೆ ಬಂಧು ಬಾಂಧವರೊಡಗೂಡಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ವಧುವಿನ ಮನೆಗೆ ವೀರನಂತೆ ಬರುತ್ತಾನೆ.

ವಧುವಿನ ಮನೆಯಿಂದ ಮುತ್ತೈದೆಯರು ಆರತಿ ತಂದು ಬೆಳಗಿ ನಿವಾಳಿಸಿದ ನಂತರ ನೆಂಟರಿಷ್ಟರ ನಡುವೆ ಧಾನ್ಯಗಳನ್ನು ಎರೆಚಾಡುತ್ತಾರೆ. ಮುತ್ತೈದೆಯರು ಎದುರಗೊಂಡು ಆರತಿ ಬೆಳಗುತ್ತಾರೆ, ಸಡಗರ ಸಂಭ್ರಮದ ನಡುವೆ ಧಾರೆ ಚಪ್ಪರದಡಿ ಬಂದ ವರವನ್ನು ಕುರ್ಚಿಯಲ್ಲಿ ಕೂರಿಸಿ ಬಿಳಿವಸ್ತ್ರವನ್ನು ಅಡ್ಡ ಹಿಡಿದು ಅಯ್ಯನವರು ಅಥವಾ ಪುರೋಹಿತರು ವರ ಮತ್ತು ವಧುವಿನ ಕಡೆಯಿಂದ ಮದುವೆಯ ಶ್ಲೋಕಗಳನ್ನು ಹೇಳಿಸುತ್ತಾರೆ. ವಿವಾಹ ಶಾಸ್ತ್ರವನ್ನು ಪುರೋಹಿತರು ಅಥವಾ ಅಯ್ಯನವರು ನೆರವೇರಿಸುವುದರಿಂದ ವೈದಿಕ ಮತ್ತು ಶೈವಧರ್ಮದ ದಟ್ಟವಾದ ಪ್ರಭಾವ ಈ ಜನಾಂಗದ ಮೇಲಾಗಿದೆ ಎಂದು ಸ್ಪಷ್ಟವಾಗುತ್ತದೆ.

**ಮನೆ ತುಂಬಿಸುವ ಕಾರ್ಯ**

ಮದುವೆಯ ಕಾರ್ಯಗಳನ್ನು ಮುಗಿಸಿಕೊಂಡು ಮನೆಗೆ ಬಂದಂತಹ ವಧು–ವರರು ವರನ ಮನೆಯ ಮುಂಭಾಗದಲ್ಲಿ ಬಂದು ನಿಲ್ಲುವರು. ವರನ ಕಡೆಯವರು ಮನೆಯ ಮುಂಭಾಗಿಲ ಹೊಸ್ತಿಲ ಮೇಲೆ ವಧು–ವರರ ಪಾದಗಳನ್ನು ತೊಳೆದು, ಬೆರಳುಗಳ ಮಧ್ಯದಡಿಯಲ್ಲಿ ಪಂಚವಾಳದ ಮಳೆಯನ್ನು ಇಟ್ಟು ಅರಿಸಿನ ಕುಂಕುಮ, ವಿಭೂತಿ ಹಚ್ಚಿ ಹೂವಿನದಳಗಳಿಂದ ಪಾದ ಪೂಜೆ ಮಾಡಿ ಹೊಸ್ತಿಲಿಗೆ ಮಳೆಯನ್ನು ಬಡಿದ ನಂತರದಲ್ಲಿ ಹೊಸ್ತಿಲ ಮೇಲೆ ತುಂಬಿದ ಅಕ್ಕಿಯ ಮೇಲೆ ಬೆಲ್ಲದಚ್ಚು ಇರುವ ಸೇರನ್ನು ಬಲಗಾಲಿನಿಂದ ಒದ್ದು ಮನೆ ಒಳಗೆ ಬರುತ್ತಾರೆ. ಬಂದ ಮೇಲೆ ನಡುಮನೆಯಲ್ಲಿ ಕಂಚಿನ ಗಂಗಳಕ್ಕೆ ಸೇರನ್ನು ಅಡ್ಡ ಇಟ್ಟು ವಧುವಿಗೆ ಕಾಲಿನಿಂದ ಒದೆಯಲು ಹಿರಿಯರು ಸೂಚಿಸಿ ಬರಮಾಡಿಕೊಳ್ಳುವುದನ್ನು ಮನೆ ತುಂಬಿಸುವ ಕಾರ್ಯವೆಂದು ಕರೆಯುವರು.

**ಗಂಗಾ ಪೂಜೆ**

ವರನ ಮನೆಯಲ್ಲಿ ವಧು ಮಾರನೆ ದಿನ ಮನೆಯನ್ನು ಸ್ವಚ್ಛಗೊಳಿಸಿದ ನಂತರ ಮಡಿಯೊಂದಿಗೆ ಮುತ್ತೈದೆರೊಂದಿಗೆ ತಾಮ್ರದ ಕೊಡಗಳನ್ನು ಹೊತ್ತು ಗಂಗೆ ಪೂಜೆಗೆ ಹೋಗುವರು. ಗಂಗೆಯನ್ನು ತುಂಬಿಸಿಕೊಂಡ ಮೇಲೆ ದಡದಲ್ಲಿ ಬೆನಕಪ್ಪನನ್ನು ಇಟ್ಟು ಎಲ್ಲಾ ತಾಮ್ರದ ಕೊಡಗಳಿಗೆ ಕಂಕಣ ಕಟ್ಟಿ, ಅರಿಸಿನ ಕುಂಕಮ, ಅಕ್ಷತೆ, ಬಳೆ, ಬಾಳೆಹಣ್ಣು, ಉತ್ತುತ್ತಿ, ಎಲೆ ಅಡಿಕೆ, ತಂಬಿಟ್ಟು, ಹೂ, ಹೊಂಬಾಳೆಗಳಿಂದ

ಅವುಗಳನ್ನು ಪೂಜೆ ಮಾಡಿ, ವಧುವಿಗೆ ಮಡಿಲು ತುಂಬುತ್ತಾರೆ. ನಂತರ ಮುತ್ತೈದೆಯರಿಗೆ ಮಡಿಲು ತುಂಬಿ ಎಲ್ಲರೂ ಗಂಗಮ್ಮನನ್ನು ಹೊತ್ತು ತರುತ್ತಾರೆ.

**ಸೀಮಂತ ಕಾರ್ಯ**

ಇದನ್ನು ಬಯಕೆಯ ಶಾಸ್ತ್ರ ಅಥವಾ ಸೀಮಂತೋತ್ಸವ ಎಂದೂ ಕರೆಯುವರು. ಹೆಸರೇ ಸೂಚಿಸುವಂತೆ ಹೆಣ್ಣಿಗೆ ಬಯಕೆಯ ಶಾಸ್ತ್ರ ಮಾಡಿ, ಅವಳ ಮಡಿಲಿನಲ್ಲಿ ಆರೋಗ್ಯಕರ ಮಗುವಿನ ನಿರೀಕ್ಷೆಯ ಜೊತೆಗೆ ಜನನ ಪ್ರಕ್ರಿಯೆ ಸುಗಮವಾಗಲಿ ಎಂದು ಹಾರೈಸುವ ಶುಭಗಳಿಗೆಯ ಶುಭ ಸಮಾರಾಂಭವೇ ಇದಾಗಿದೆ. ಕುಂಚಿಟಿಗರಲ್ಲಿ ಹೆಣ್ಣು ದಾಂಪತ್ಯದೊಂದಿಗೆ ಹೆಣ್ತನದ ರುಜುವಾತಿಗೆ ಗರ್ಭವತಿಯಾದಗಲೇ ಸಮುದಾಯ ಅಥವಾ ಆ ಕುಟುಂಬ ಸಂತೃಪ್ತಿ ಹೊಂದುವುದು. ಗರ್ಭವತಿಯಾದ ಹೆಣ್ಣು, ತನ್ನ ಗಂಡನ ಮನೆಯಲ್ಲಿರುವಾಗಲೇ ಈ ಸೀಮಂತ ಕಾರ್ಯ ನಡೆಯುತ್ತದೆ.

ಸಾಮಾನ್ಯವಾಗಿ ಗರ್ಭಿಣಿಯಾದ ಏಳು ಅಥವಾ ಒಂಬತ್ತು ತಿಂಗಳು ತುಂಬುವ ಮೊದಲು ಸೀಮಂತ ಕಾರ್ಯ ಮಾಡುವರು. ಪ್ರತಿ ಹೆಣ್ಣಿಗೆ ತನ್ನ ಚೊಚ್ಚಲ ಹೆರಿಗೆ ತನ್ನ ತವರೂರಲ್ಲೇ ಆಗಬೇಕೆಂಬ ಹೆಬ್ಬಯಿಕೆ ಇರುತ್ತದೆ. ಈ ಶುಭ ಸಮಾರಂಭ ಹೆಣ್ಣಿನ ಜೀವನದ ಪರಿಪೂರ್ಣತೆ ಮತ್ತು ಧನ್ಯತೆಯ ಭಾವವನ್ನು ಹೊರ ಹೊಮ್ಮಿಸುತ್ತದೆ. ತವರೂರಿನ ತಂದೆ ತಾಯಿಯಿಂದ ಹಣ್ಣು–ಹಂಪಲು ಹೂವುಗಳ ಜೊತೆ ಸಿಹಿ ಖಾದ್ಯಗಳನ್ನು ಗರ್ಭಿಣಿಗೆ ಕಳುಹಿಸಿ ಕೊಡುತ್ತಾರೆ. ಹೀಗೆ ವೈಭವಯುತವಾಗಿ ಗಂಡನ ಮನೆಯಲ್ಲಿ ಸೀಮಂತದ ಆಚರಣೆ ನಡೆಯುತ್ತದೆ.

**ಅಂತ್ಯಸಂಸ್ಕಾರ**

ಹುಟ್ಟು–ಸಾವು ಅಥವಾ ಜನನ ಮರಣ ಇವು ಒಂದು ನಿರಂತರ ನಡೆಯುವ ಪ್ರಕ್ರಿಯೆ. ಇದು ನಿಸರ್ಗದತ್ತವಾದ ವರದಾನ, ಆದ್ದರಿಂದ ಹುಟ್ಟು–ಸಾವುಗಳ ಮಧ್ಯದಲ್ಲಿ ಒಳ್ಳೆಯದನ್ನು ಬಯಸಬೇಕು. ಒಳ್ಳೆಯದನ್ನೇ ಮಾಡಬೇಕು. ಸದಾಚಾರ ಶೀಲನಾಗಿ ಸತ್ಕಾರ್ಯಗಳಲ್ಲಿ ಭಾಗಿಯಾಗುವುದೇ ಮಾನವನ ಬದುಕಿನ ಮುಖ್ಯವಾದ ಧ್ಯೇಯ ಮತ್ತು ಗುರಿಯಾಗಬೇಕು. ಹುಟ್ಟು ಆಕಸ್ಮಿಕವಾದರೆ ಸಾವು ಕಟ್ಟಿಟ್ಟ ಬುತ್ತಿ ನಿಜವಾದುದರಿಂದ ಸಮಾಜಕ್ಕೆ ಹಿತವಾಗುವಂತಹ ಕಾರ್ಯಗಳನ್ನು ಮಾಡಬೇಕು. 'ಪರೋಪಕಾರಾರ್ಥಯ ಮಿದುಂ ಶರೀರಂ' ಎಂಬ ಉಪನಿಷತ್ ವಾಕ್ಯದಂತೆ ಪರರಿಗೆ ಉಪಕಾರವನ್ನೇ ಮಾಡಿ ಮಾನವನು ಬದುಕಿನ ಸಾರ್ಥಕತೆಯನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ.

ಅನುಭಾವಿಗಳು 'ಮರಣವೇ ಮಹಾನವಮಿ' ಎಂದಿರುವ ಶರಣರ ಸಿದ್ಧಾಂತವನ್ನು ನಾವಿಂದು ಗ್ರಹಿಸಬೇಕು. ಸಾವು ಒಂದು ನಿರಂತರ ಸತ್ಯ. ಇದು ಪ್ರಕೃತಿಯ ನಿಯಮ. ವ್ಯಕ್ತಿಯೊಬ್ಬ ಸತ್ತಾಗ ಅವನ ದೇಹವನ್ನು ಸುಡುವವರೆಗಿನ ವಿಧಿವಿಧಾನಗಳು ಕುಂಚಿಟಿಗ ಸೇರಿದಂತೆ ಇತರೆ ಸಮುದಾಯದ ಜನಾಂಗಗಳಲ್ಲಿ ಸಾಮಾನ್ಯವಾಗಿ ಒಂದೇ ರೀತಿಯಾಗಿ ನಡೆಯುತ್ತವೆ. ಕೆಲವರು ಮಣ್ಣಿನಲ್ಲಿ ಹೂಳಿದರೆ ಕೆಲವರು ಅಗ್ನಿ ಸಂಸ್ಕಾರ ಮಾಡುತ್ತಾರೆ. ಪಂಚಭೂತಗಳಲ್ಲಿ ದೇಹ ಲೀನವಾದ ಬಳಿಕ ನಡೆಯುವ ಆಚರಣೆಗಳು ಭಿನ್ನ ಭಿನ್ನವಾಗಿರುತ್ತವೆ. ಕ್ರಿಯಾ ವಿಧಾನಗಳು ಭಿನ್ನ ಭಿನ್ನವಾದರೂ ಯಾರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವ್ಯಕ್ತಿಯ ಒಳ್ಳೆಯತನವನ್ನು ಆತನ ಸಾವು ಹೇಳುತ್ತದೆ ಎಂಬುದು ಜನರ

ಅಭಿಮತವಾಗಿದೆ. ವ್ಯಕ್ತಿಯ ಬದುಕಿನ ಕರ್ಮಫಲಗಳಿಗೆ ಅನುಗುಣವಾಗಿ ಸ್ವರ್ಗ–ನರಕ ಕಲ್ಪಿಸಲು ಕೈಲಾಸವಾಸಿ ಶಿವ ಇದ್ದಾನೆಯೆಂಬುದು ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿದೆ ಎಂದು ಹೇಳಿದ ಡಾ.ಕೆ.ಅನ್ನದಾನಿ ಅವರ ಹೇಳಿಕೆಯಂತೆ ಸಮಾಜಕ್ಕೆ ನ್ಯಾಯ ಧರ್ಮಗಳಿಗೆ ವಿರುದ್ಧವಾಗಿ ವ್ಯಕ್ತಿ ನಡೆದುಕೊಳ್ಳುವುದಿಲ್ಲ. ಆಚರಣೆಗಳನ್ನು ಬಿಟ್ಟು ವ್ಯಕ್ತಿ ಇಲ್ಲ. ವ್ಯಕ್ತಿಯನ್ನು ಬಿಟ್ಟು ಆಚರಣೆಗಳಿಲ್ಲ. ಈ ಹಿನ್ನೆಲೆಯಲ್ಲಿ ಕುಂಚಿಟಿಗರ ಶವಸಂಸ್ಕಾರದ ಆಚರಣೆಗಳು ಬೇರೆ ಸಮುದಾಯದವರಂತೆಯೇ ಇದ್ದರೂ ಸಹ ಕೆಲವೊಂದು ವಿಶೇಷವಾದ ಆಚರಣೆಗಳಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ.

**ಕುಂಚಿಟಿಗರ ವಾರ್ಷಿಕಾವರ್ತನ ಆಚರಣೆಗಳು**

ವಾರ್ಷಿಕ ವರ್ತನವು ಕಾಲದಿಂದ ಕಾಲಕ್ಕೆ ಬದಲಾಗುವಂತಹ ಋತುಮಾನಗಳನ್ನು ಅವಲಂಬಿಸಿದ್ದು ಉತ್ಪಾದನಾ ವಿಧಾನಗಳೊಂದಿಗೆ ನೇರ ಸಂಬಂಧವನ್ನು ಹೊಂದಿವೆ. ಋತುಮಾನಗಳಿಗೆ ಹೊಂದಿಕೊಂಡು ವರ್ಷವೊಂದರಲ್ಲಿ ಆವರ್ತನೆಗೊಳ್ಳುವ ಆಚರಣೆಗಳನ್ನು ವಾರ್ಷಿಕಾವರ್ತನ ಆಚರಣೆಗಳೆಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿಯೇ ನಮ್ಮ ಸಂಸ್ಕೃತಿಯ ರಚನೆಗಳು ರೂಪುಗೊಳ್ಳುವುದರಲ್ಲಿ ಹವಾಮಾನ, ಬೆಳೆದ ಬೆಳೆ, ಕುಟುಂಬದ ರಚನೆ, ಜಾತಿ ಎಲ್ಲವೂ ವಾರ್ಷಿಕಾವರ್ತನವನ್ನು ರೂಪಿಸುತ್ತವೆ. ಜಗತ್ತಿನ ಬೇರೆ ಬೇರೆ ಕಡೆ ಇಂಥ ಆಚರಣೆಗಳು ರೂಪುಗೊಂಡಿರಬಹುದು. ಅಂತೆಯೇ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಕುಂಚಿಟಿಗರ ವಾರ್ಷಿಕಾವರ್ತನ ಆಚರಣೆಗಳಲ್ಲಿ ಪ್ರಮುಖವಾಗಿ ಹಬ್ಬ–ಹುಣ್ಣಿಮೆಗಳು, ಜಾತ್ರೆ–ರಥೋತ್ಸವಗಳು, ಆಚರಣೆ–ನಂಬಿಕೆಗಳು ಮತ್ತು ಮಾಟ–ಮಂತ್ರಗಳು ಎಂದು ವಿಭಾಗಿಸಿಕೊಳ್ಳಬಹುದು.

**ಹಬ್ಬ–ಹುಣ್ಣಿಮೆ**

ಹಬ್ಬಗಳು ಸಾಮಾನ್ಯವಾಗಿ ಸಾಮಾಜಿಕ ಅಥವಾ ಸಾರ್ವತ್ರಿಕ ಸ್ವರೂಪದ ಆಚರಣೆಗಳಾಗಿರುತ್ತವೆ. ವ್ಯಕ್ತಿಗತವಾದ ಆಚರಣೆಗಳು ಹಬ್ಬಗಳೆನಿಸಿಕೊಳ್ಳುವುದಿಲ್ಲ. ಕುಂಚಿಟಿಗರು ಹಿಂದೂ ಪಂಚಾಂಗದ ಪ್ರಕಾರ ಬರುವ ಹುಣ್ಣಿಮೆ, ಅಮವಾಸ್ಯೆ ಹಾಗೂ ಹಬ್ಬ–ಹರಿದಿನಗಳನ್ನು ಸಂವತ್ಸರ, ಕಾಲ, ಋತು ಮಾಸಗಳಿಗೆ ಅನುಗುಣವಾಗಿ ಆಚರಿಸುವ ವಿಶೇಷ ಹಬ್ಬಗಳೆಂದರೆ ಯುಗಾದಿ, ಶ್ರೀರಾಮನವಮಿ, ಹನುಮ ಜಯಂತಿ, ಬಸವ ಜಯಂತಿ, ನರಸಿಂಹ ಜಯಂತಿ, ನಾಗರ ಪಂಚಮಿ, ಕಾರ ಹುಣ್ಣಿಮೆ, ಗೌರಿ ಗಣೇಶ, ಮಹಾಲಯ ಅಮವಾಸ್ಯೆ, ಆಯುಧ ಪೂಜೆ, ವಿಜಯ ದಶಮಿ, ಲಕ್ಷ್ಮೀಪೂಜೆ, ದೀಪಾವಳಿ, ತುಳಸಿ ಪೂಜೆ, ಕಾರ್ತಿಕ ಹಬ್ಬ, ಧನುರ್ಮಾಸ, ಸಂಕ್ರಾಂತಿ, ಭರತ ಹುಣ್ಣಿಮೆ, ಶಿವರಾತ್ರಿ ಇತರೆ ಹಬ್ಬಗಳು ಕಾಲ ಚಕ್ರದಂತೆ ಹಂತ ಹಂತವಾಗಿ ಬರುತ್ತವೆ.

ಹೀಗೆ ರೈತಾಪಿ ಜನರ ಬೇಸರ ನೀಗಿಸಿ ಹೊಸ ಹುರುಪು ನೀಡಲು ಹಬ್ಬಗಳು ಸಹಕಾರಿಯಾಗಿವೆ. ಯುಗಾದಿ ಎಂದರೆ ವರ್ಷದ ಮೊದಲನೆಯ ದಿನ. ಬೇವು ಬೆಲ್ಲದ ಜೊತೆ ಮೊದಲ ಬೇಸಾಯಕ್ಕೆ ಶಾವಿಗೆಯನ್ನು ಬಸಿಯುತ್ತಾರೆ. ಮಾರನೇಯ ದಿನ ಚಂದ್ರದರ್ಶನ ನಿಮಿತ್ತ ಹೋಳಿಗೆಯ ಜೊತೆ ವಿಶೇಷ ಖಾದ್ಯಗಳನ್ನು ತಯಾರಿಸುತ್ತಾರೆ. ದ್ರಾವಿಡ ಜನರ ಬಹಳ ಮುಖ್ಯ ಆಚರಣೆ ಎಂದರೆ ನಾಗರಪೂಜೆ, ಕುಂಚಿಟಿಗ ಸ್ತ್ರೀಯರು ಪ್ರಮುಖವಾಗಿ ನಾಗನಿಗೆ ಅಥವಾ ಹುತ್ತಕ್ಕೆ ಹಾಲೆರೆದು ನಂತರ ಕಾರ್ಣಿಕ ಆಚರಣೆ ಕಡೆಗೆ ನವದಂಪತಿಗಳು ಸಾಗುತ್ತಾರೆ.

ಒಕ್ಕಲುತನದ ಹೆಣ್ಣನ್ನು ಶಿವ ಮೆಚ್ಚಿ ಮದುವೆಯಾದ. ಅವಳೇ ಗೌರಿ. ವರ್ಷಕ್ಕೊಮ್ಮೆ ತವರು ಮನೆಗೆ ಬರುವ ಅವಳನ್ನು ಕರೆದುಕೊಂಡು ಹೋಗಲು ಮಗ ಗಣೇಶ ಬರುತ್ತಾನೆ ಎಂಬ ನಂಬಿಕೆಯ ಏಕಕಾಲದಲ್ಲಿ ಬರುವ ಗೌರಿ–ಗಣೇಶ ಹಬ್ಬವನ್ನು ಕುಂಚಿಟಿಗರು ವಿಜೃಂಬಣೆಯಿಂದ ಆಚರಿಸುತ್ತಾರೆ. ಕಡುಬು, ಚಕ್ಕಲಿ ಮತ್ತು ಒಬ್ಬಟ್ಟು ಅಂದಿನ ವಿಶೇಷ ಅಡಿಗೆ. ಇನ್ನು ಮಹಾನವಮಿಯನ್ನು ಪಿತೃಪಕ್ಷ ಎಂದು ಆಚರಿಸುತ್ತಾರೆ. ಅನ್ನಪಾಯಸ ಅಂದಿನ ಮುಖ್ಯ ಊಟ.

ಇವಲ್ಲದೆ ಹಿಂದೂಗಳು ಆಚರಿಸುವ ಎಲ್ಲಾ ಹಬ್ಬಗಳನ್ನು ಅವರವರ ಅನುಕೂಲ ಶಕ್ತಿಗೆ ನೋಡಿಕೊಂಡು ಆಚರಿಸುವ ಪರಿಪಾಟ ದಾವಣಗೆರೆ ಮತ್ತು ಚಿತ್ರದುರ್ಗ ಪರಿಸರಗಳಲ್ಲಿ ಬೆಳೆದುಬಂದಿದೆ. ಜೊತೆಗೆ ವರ್ಷಕ್ಕೆ ಒಂದೆರಡು ವರ್ಷಕ್ಕೊಮ್ಮೆ ಗ್ರಾಮದೇವತೆಗಳ ಹಬ್ಬ ಮತ್ತು ಜಾತ್ರೆಗಳನ್ನು ಆಚರಿಸುತ್ತಾರೆ. ಇಂತಹ ಹಬ್ಬ ಜಾತ್ರೆ ಉತ್ಸವ ಪರಿಷೆಗಳ ಸಂದರ್ಭದಲ್ಲಿ ಹೊಸ ಬಟ್ಟೆ ತೊಟ್ಟು ವಿಶೇಷ ಅಡುಗೆ ಊಟ ಮಾಡಿಕೊಂಡು ಪುರಾಣ ಪುಣ್ಯಕತೆಗಳನ್ನು ಕೇಳಿ ಆಟಪಾಟ ವಿನೋದಗಳಲ್ಲಿ ಮೈಮರೆತು ಹಿಂದಿನ ಕಹಿ ಘಟನೆಗಳನ್ನು ಮರೆತು ಹೊಸ ಜೀವನೋತ್ಸಾಹಕ್ಕೆ ಸಿದ್ಧರಾಗುವುದನ್ನು ನಾವು ಕುಂಚಿಟಿಗರಲ್ಲಿ ಕಾಣಬಹುದಾಗಿದೆ.

**ಜಾತ್ರೆ–ರಥೋತ್ಸವಗಳು**

ಸಮಾಜದ ಒಳಿತಿಗಾಗಿ, ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮೋತ್ಸಾಹಗಳಿಂದ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬ ಜಾತ್ರೆಗಳು. ಇಂಗ್ಲೀಷಿನ Festival ಪದ ಹಬ್ಬ ಮತ್ತು ಜಾತ್ರೆ ಎರಡನ್ನೂ ಒಳಗೊಳ್ಳುವಂಥದು, Festival is complex unit of customs and other folklore to celebrate a special occasion, usually annually; and of public interest. **ಆರ್.ಎಸ್. ಬಾಗ್ಸ್**ರವರ ವಿವರಣೆಯಂತೆ Festival ಎಂದರೆ ಸಂಪ್ರದಾಯ, ರೂಢಿ ಹಾಗೂ ಕಲಾ ಪ್ರದರ್ಶನಗಳನ್ನು ಜರುಗಿಸುವ ಒಂದು ವಿಶೇಷ ಸಂದರ್ಭ. ವರ್ಷಕ್ಕೊಮ್ಮೆ ಆಚರಿಸುವಂಥದು, ಸಾಮಾಜಿಕ ಆಸಕ್ತಿಯುಳ್ಳಂಥದು. ಈ ಲಕ್ಷಣಗಳನ್ನು ನಮ್ಮ ಹಬ್ಬ ಜಾತ್ರೆಗಳಲ್ಲೂ ಕಂಡುಬರುತ್ತವೆ.

ಹರೆಯದ ಹುಡುಗರ (ಯುವಕರ) ಸೊಕ್ಕು ಮುರಿಯಬೇಕಾದರೆ ಮದುವೆ ಮಾಡಬೇಕಂತೆ; ಊರಿನ ಸೊಕ್ಕು ಮುರಿಯಬೇಕಾದರೆ ಜಾತ್ರೆ ಮಾಡಬೇಕೆಂತೆ!' ಎಂಬುದು ಗಾದೆ ಮಾತಿನ ತಾತ್ಪರ್ಯವಾಗಿದೆ. ಈಗಾಗಲೇ ಹೇಳಿದಂತೆ ದುಡಿಮೆಯೇ ದೇವರೆಂದು ನಂಬಿರುವ ಹಳ್ಳಿಯ ಜನತೆಗೆ ಮಣ್ಣಿನ ಮಕ್ಕಳಿಗೆ ರೈತಾಪಿ ವರ್ಗಕ್ಕೆ ಕೂಲಿಕಾರ್ಮಿಕರಿಗೆ ಜಾತ್ರೆಗಳು ಮನರಂಜನೆ ನೀಡಿ ದುಡಿದ ಮನಕ್ಕೆ ಮುದ ನೀಡುತ್ತವೆ. ಜನಪದ ಕಲಾವಿದರು ತಮ್ಮ ಕಲೆಗಳಿಂದ ಜನತೆಯ ಮನಸ್ಸನ್ನು ರಂಜಿಸುವುದರ ಜೊತೆಗೆ ದೈವತೆಯ ಮಹಿಮೆಯನ್ನು ತೋರಿಸುವುದು ಕೂಡ ಜಾತ್ರೆಗಳ ವಿಶೇಃಷ ಗುಣವಾಗಿದೆ.

**ಹರಕೆಗಳು**

ಯಾವುದೇ ಸಮುದಾಯದ ವ್ಯಕ್ತಿಗಳಿಗೆ ಕಷ್ಟ ಬಂದಾಗ ತಾವು ನಂಬಿರುವ ದೇವರಿಗೆ ಹರಕೆ ತೀರಿಸಿಕೊಳ್ಳುವುದು ಪ್ರಮುಖ ಪದ್ಧತಿಯಾಗಿದೆ. ಹರಕೆಗಳು ವಸ್ತುಗಳ ರೂಪದಲ್ಲಿರುಬಹುದು ಹಣದ ರೂಪದಲ್ಲಿರಬಹುದು ಪ್ರಾಣಿ ಬಲಿಯಾಗಿರಬಹುದು ತಲೆಮುಡಿಯಾಗಿರಬಹುದು ದೀಡ ನಮಸ್ಕಾರ

ಹಾಕುವುದಾಗಿರಬಹುದು. ಹರಕೆ ಮಾಡಿಕೊಂಡ ನಂತರ ತನ್ನ ಕಷ್ಟಗಳು ಪರಿಹಾರವಾದ ಮೇಲೆ ಆ ದೇವರಿಗೆ ಹೋಗಿ ಹೊತ್ತು ಕೊಂಡ ಹರಕೆಯನ್ನು ತೀರಿಸುತ್ತಾರೆ. ಕುಂಚಿಟಿಗರು ತಾವು ನಂಬಿರುವ ದೇವರಿಗೆ ಹಲವಾರು ಹರಕೆಗಳನ್ನು ಮಾಡಿಕೊಳ್ಳುವುವದರೊಂದಿಗೆ ಜೊತೆಗೆ ತೀರ್ಥಕ್ಷೇತ್ರಗಳಿಗೆ ಹೋಗಿ ಅದರಂತೆ ಹರಕೆಗಳನ್ನು ತೀರಿಸುವುದು ಅನಾದಿ ಕಾಲದಿಂದಲೂ ಬೆಳೆದು ಬಂದುದಾಗಿದೆ.

**ಆಚರಣೆ–ನಂಬಿಕೆಗಳು**

ಭಾರತ ಹಳ್ಳಿಗಳ ದೇಶ. ಕಾಲಾತೀತವಾದ ನಂಬಿಕೆಗಳು ಶ್ರದ್ಧೆ ಭಕ್ತಿ ಹಳ್ಳಿಗರಲ್ಲಿ ಮನೆ ಮಾತಾಗಿವೆ. ಈಗಲೂ ನಂಬಿಕೆಯ ಆಧಾರದಿಂದಲೇ ಬದುಕು ಸಾಗಿಸುವವರಿರುವುದೇ ಹೆಚ್ಚು! ಜನಪದ ನಂಬಿಕೆಗಳು ಪರಂಪರಾನುಗತವಾಗಿ ಅಂಗೀಕೃತವಾದಂತಹ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷೆಣೆಗಳು ಮುಖ್ಯವಾಗುತ್ತವೆ.

ನಂಬಿಕೆಗಳು ಜನಪದರ ಜೀವನಾನುಭವದ ಉತ್ಪನ್ನಗಳು. ಹೀಗಾಗಿ ಮಾನವನ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ ಅದು ಸೂಚನೆ, ನಿಯಮ, ವಿಧಿ ನಿಷೇದ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ, ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿವೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದಲೇ ಪ್ರೇರಿತವಾದವುಗಳಾಗಿವೆ. ನಂಬು ನಂಬೆಲೆ ಜೀವಿ ಎಂದು ಹಳ್ಳಿಗರ ಮಾತಿದೆ. 'ನಂಬಿ ಕರೆದರೆ ಓ ಎನ್ನನೇ ಶಿವನು?' ಎಂದು ಬಸವಣ್ಣನವರೂ ಹೇಳಿದ್ದುಂಟು. ನಂಬಿಕೆಯೇ ದೇವರು ಎಂಬ ಪರಿಕಲ್ಪನೆಯೂ ಜನಪದರ ಜೀವನ ಕ್ರಮದಲ್ಲಿ ಹಾಸು ಹೊಕ್ಕಾಗಿದೆ. ಅದು ಜನಪದ ಪ್ರಕಾರಗಳಾದ ಗಾದೆ, ಜನಪದ ವೈದ್ಯ, ಜನಪದ ಕಥೆ, ಜನಪದ ಪುರಾಣ, ಜನಪದ ಮಂತ್ರವಿದ್ಯೆ, ಜನಪದ ಧರ್ಮ ಇವುಗಳೊಂದಿಗೆ ಒಳ ಸಂಬಂಧವನ್ನು ಹೊಂದಿವೆ.

ಜನಪದರ ಬದುಕಿನಲ್ಲಿ ನಂಬಿಕೆಯೇ ಮೂಲಾಧಾರವಾಗಿದೆ. ಈ ಆಚರಣೆ ನಂಬಿಕೆಗಳು ಕುಂಚಿಟಿಗರ ಒಕ್ಕಲುತನ ಸಂಸ್ಕೃತಿಯ ನಿಶ್ಚಿತ ಭೂಪ್ರದೇಶದಲ್ಲಿ ಶಾಶ್ವತವಾಗಿ ನೆಲೆಸಿದಾವುಗಳಾಗಿವೆ. ಇಲ್ಲಿಯ ಸದಸ್ಯರಲ್ಲಿ ಸಮುದಾಯ ಪ್ರಜ್ಞೆ, ಸಾಂಸ್ಕೃತಿಕ ಮತ್ತು ಆರ್ಥಿಕ ಬಾಂಧವ್ಯಗಳನ್ನು ಬೆಳೆಸಿಕೊಂಡಿರುತ್ತದೆ. ಒಕ್ಕಲಿಗನು ಯಾವಾಗಲೂ ಪ್ರಕೃತಿ ಮಾತೆಯ ಬಳಿ ಸಾರಿ ದುಡಿಯುತ್ತಾನೆ. ಅವನಿಗೂ ನಿಸರ್ಗಕ್ಕೂ ಮಧ್ಯೆ ಅತಿ ನಿಕಟವಾದ ಸಂಬಂಧವಿರುತ್ತದೆ. ಕುಂಚಿಟಿಗಗನ ಒಡನಾಡಿಗಳೆಂದರೆ ಬೆಳೆಗಳು ಮತ್ತು ದನಕರುಗಳು. ಬೆಳೆಗಳ ಸಾಲುಗಳ ಮಧ್ಯದಲ್ಲಿ ಅಡ್ಡಾಡುವುದೆಂದರೆ ಅವನಿಗೆ ಎಲ್ಲಿಲ್ಲದ ಆನಂದ. ಅವನು ಪ್ರಕೃತಿ ಪ್ರಿಯನಾಗಿದ್ದು, ಪ್ರಕೃತಿಯ ಸಾನಿಧ್ಯದಲ್ಲಿ ವಾಸಿಸುತ್ತಾನೆ. ಅವುಗಳ ಆಸರೆಯಿಂದಲೇ ಬದುಕುತ್ತಾನೆ.

ಪ್ರಕೃತಿಯೆಂದರೆ ಅವನ ದೃಷ್ಟಿಯಲ್ಲಿ ಕಲ್ಲು ಮಣ್ಣಲ್ಲ ಅವಳು ಸಾಕ್ಷಾತ್ ದೇವತೆ. ಅವಳು ಸಂತೋಷ ಸಮಾಧಾನದಿಂದ ಇದ್ದರೆ ಸಮೃದ್ಧಿಯೇ ಸಮೃದ್ಧಿ, ಆಕೆ ರೊಚ್ಚಿಗೆದ್ದರೆ ಅವನ ಸಂಕಷ್ಟಗಳಿಗೆ ಮಿತಿ ಇಲ್ಲ. ಅತಿವೃಷ್ಟಿ, ಅನಾವೃಷ್ಟಿ, ನೆರೆ ಹಾವಳಿ, ಚಂಡಮಾರುತ, ಕ್ಷಾಮ, ಕ್ಲೋಭೆಗಳನ್ನು ಉಂಟು ಮಾಡುತ್ತಾಳೆ ಎಂಬ ನಂಬಿಕೆಯಿಟ್ಟಿರುತ್ತಾನೆ. ಬೆಳೆಗಳು ಹುಲುಸಾಗಿ ಬರಲೆಂದು, ಕುಟುಂಬದ ಜನರು, ದನಕರುಗಳು ಸುಖವಾಗಿ ಇರಲೆಂದು ಅವನು ಪ್ರಕೃತಿಯನ್ನು ಆರಾಧಿಸುತ್ತಾನೆ. ಹಬ್ಬ, ಹುಣ್ಣಿಮೆ, ವಾರ, ತಿಥಿಗಳನ್ನು ಆಚರಿಸುತ್ತಾನೆ.

**ಮಾಟ–ಮಂತ್ರ**

ಮಾಟ–ಮಂತ್ರಗಳು ಇಂದು ನಿನ್ನೆಯದಲ್ಲ ಪುರಾತನ ಕಾಲದಿಂದಲೂ ಸಮಾಜದಲ್ಲಿ ಆಚರಣೆಯಲ್ಲಿವೆ. ಇದು ಪ್ರಕೃತಿಯನ್ನೂ ಭೂತ–ಪ್ರೇತಾದಿಗಳನ್ನೂ ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಮಿಥ್ಯಾಭಿಪ್ರಾಯವುಳ್ಳ ವಿದ್ಯೆಯೇ ಮಂತ್ರವಿದ್ಯೆ. ಇದಕ್ಕೆ ಮೋಡಿ, ಮಾಟ, ಇಂದ್ರಜಾಲ, ಯಕ್ಷಿಣಿ, ಕಣ್ಕಟ್ಟು, ಗಾರುಡಿ ವಿದ್ಯೆ ಇವೆಲ್ಲ ಸಂವಾದಿ ಪದಗಳೆಂದು ನಿಘಂಟುಗಳು ಸೂಚಿಸಿವೆ. ಅನೈಸರ್ಗಿಕ ಅಥವಾ ಅಮಾನುಷ ವಿಧಾನದಲ್ಲಿ ನೈಸರ್ಗಿಕ ವ್ಯಾಪಾರಗಳನ್ನು ನಿಯಂತ್ರಿಸುವ ಕ್ರಿಯೆಯೇ ಮಾಟವು ತಿಳಿಸುತ್ತದೆ.

ಮಾಟದ ವಿಸ್ತರಣೆಯೇ ವಿಜ್ಞಾನವೆಂದೂ, ಅದು ಉನ್ನತ ಸ್ಥಾನದಲ್ಲಿರುವ ಶಕ್ತಿಯೆಂದೂ ಉದ್ದಿಷ್ಟ ಸಾಧನೆಗಾಗಿ ಮಾಟ ತನ್ನ ಗುರಿಯನ್ನು ಈಡೇರಿಸಿಕೊಳ್ಳುತ್ತದೆಂದೂ ಪ್ರಾಚೀನ ಮಾನವನ ಬದುಕಿನಲ್ಲಿ ಇವು ಮಹತ್ತರವಾದ ಪಾತ್ರ ವಹಿಸುತ್ತವೆ. ಹಾಗೆಯೇ ಮಾಟ–ಮಂತ್ರ ಧರ್ಮದಂತೆಯೇ ವಿಶ್ವದಾದ್ಯಂತವೂ ಕಂಡುಬರುತ್ತದೆ. ಒಂದೊಂದು ಜನಾಂಗದಲ್ಲಿ ಒಂದೊಂದು ಬಗೆಯಲ್ಲಿ ಅದರ ಆಚರಣೆ ಇರುವುದು ಗಮನಾರ್ಹ. ಒಂದು ಕಡೆ ಅದಕ್ಕೆ ಅತಿ ಹೆಚ್ಚಿನ ಮಾನ್ಯತೆ ಇದ್ದರೆ ಇನ್ನೊಂದೆಡೆ ಅಷ್ಟೇ ನಿರ್ಲಕ್ಷ್ಯವೂ ಇದೆ. ಆದರೂ ಮಂತ್ರವಿದ್ಯೆ ಎಲ್ಲರ ಸ್ವತ್ತಾಗಿ ಕಂಡು ಬರದಿದ್ದರೂ ಕೆಲವರ ಸ್ವತ್ತಾಗಿ ಮತ್ತೆ ಕೆಲವರಿಗೆ ಕುತ್ತಾಗಿರುವುದು ಸಾಮಾನ್ಯವಾಗಿ ತಿಳಿಯುವ ಅಂಶವಾಗಿದೆ.

**ಉಪಸಂಹಾರ**

ಭಾವನೆ ಮತ್ತು ಆಲೋಚನೆಯ ರೂಪದಲ್ಲಿ ನಂಬಿಕೆಯಿದ್ದು, ಕ್ರಿಯಾರೂಪದಲ್ಲಿ ಆಚರಣೆ ಇರುತ್ತದೆ. ಒಟ್ಟಿನಲ್ಲಿ ನಂಬಿಕೆ ಮತ್ತು ಆಚರಣೆಗಳಿಗೆ ಪರಸ್ಪರ ಸಂಬಂಧವಿದ್ದು ಒಂದನ್ನೊಂದು ಪ್ರತಿನಿಧಿಸುತ್ತದೆ ಎನ್ನಬಹುದು. ಈ ಆಚರಣೆ–ನಂಬಿಕೆಗಳು ಕುಂಚಿಟಿಗರ ಒಕ್ಕಲುತನ ಸಂಸ್ಕೃತಿಯ ನಿಶ್ಚಿತ ಭೂಪ್ರದೇಶದಲ್ಲಿ ಶಾಶ್ವತವಾಗಿ ನೆಲೆಸಿದವೆಂದು ತಿಳಿಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಆಂಜನಪ್ಪ ವಿ. (2011). ಕುಂಚಿಟಿಗ ಸಮಾಜ ಪರಿಚಯ. ವಿಶ್ವ ಕುಂಚಿಟಿಗರ ಪರಿಷತ್ತು ಬೆಂಗಳೂರು.
- ಆಂಜನಪ್ಪ ವಿ. (2010). ಕುಂಚಿಟಿಗರ ಇತಿಹಾಸ ಮತ್ತು ಸಂಸ್ಕೃತಿ ದರ್ಶನ. ಉಷಾ ಪ್ರಕಾಶನ ಬೆಂಗಳೂರು.
- ಗಿರಿಜಾ ಟಿ. (2001). ದಾವಣಗೆರೆ ಇದು ನಮ್ಮ ಜಿಲ್ಲೆ. ನಿಹಾರಿಕ ಪ್ರಕಾಶನ, ದಾವಣಗೆರೆ.
- ತಾರಿಹಳ್ಳಿ ಹನುಮಂತಪ್ಪ. (2010). ಕರ್ನಾಟಕದ ಬುಡಕಟ್ಟು ಸಮುದಾಯಗಳು. ಪ್ರಸಾರಾಂಗ ಕವಿವಿ, ಹಂಪಿ.
- ದೇಜಗೌ. (2015). ಜಾನಪದ ಅಧ್ಯಯನ. ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.
- ನರಸಿಂಹಮೂರ್ತಿ. ಎನ್. (2007). ಸಂಪ್ರದಾಯಗಳು. ಮಂಗಳ ಪ್ರಕಾಶನ, ಮೈಸೂರು.

- ನಾಗರಾಜು. ಎಂ. ಹೆಚ್. (2003). ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ. ಅನಿಕೇತನ ಪ್ರಕಾಶನ, ತುಮಕೂರು.
- ನಾಯಕ ಡಿ. ಬಿ. (ಪ್ರ.ಸಂ.) (2017). ಕರ್ನಾಟಕ ಗ್ರಾಮಚರಿತ್ರೆ ಕೋಶ ಚಿತ್ರದುರ್ಗ ಜಿಲ್ಲಾ ಸಂಪುಟ. ಭಾಗ 1 ಮತ್ತು 2. ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಹಾವೇರಿ ಜಿಲ್ಲೆ.
- ಮಂಜುನಾಥ ಬೇವಿನಕಟ್ಟೆ. (2017). ಕನ್ನಡ ಜನಪದ ನಂಬಿಕೆಗಳು. ಜ್ಯೋತಿ ಪ್ರಕಾಶನ, ಮೈಸೂರು.
- ಮೀರಾಸಾಬಿಹಳ್ಳಿ ಶಿವಣ್ಣ (ಸಂ.) (2012). ಕುಂಚಿಟಿಗರು. ಸ್ವಾನ್ ಪ್ರಿಂಟರ್ಸ್, ಬೆಂಗಳೂರು.
- ರಮೇಶ. ಸ. ಚಿ. (ಸಂ.) (2003). ಮಾಟ–ಮಂತ್ರ–ಮೋಡಿ. ಪ್ರಸಾರಾಂಗ ಕವಿವಿ ಹಂಪಿ
- ಹೆಬ್ಬಾಲೆ. ಕೆ. ನಾಗೇಶ್. (2011). ಬಹುಸಂಸ್ಕೃತಿ ಮತ್ತು ದೇಸೀಜಾತ್ರೆಗಳ ಮಹಾಸಮನ್ವಯ. ಪ್ರಸಾರಾಂಗ, ಕ.ವಿ.ವಿ, ಹಂಪಿ.
- ಶಿವಲಿಂಗಪ್ಪ. ಸಿ(ಸಂ.) (2006). ಜನಪದ ಸಾಂಸ್ಕೃತಿಕ ವೀರರು. ಪ್ರಸಾರಾಂಗ, ಕುವಿವಿ ಶಂಕರಘಟ್ಟ.
- Nanjundayya H. V. and L. K. Ananth Krishna Iyer. (1931). The Mysore Tribes and Castes, VOL- IV, Mysore University, Mysore.